17. ಚಿಕ್ಕನಾಯಕನಹಳ್ಳಿಯಲ್ಲಿ ವಯಸ್ಕರ ಶಿಕ್ಷಣ ಕೇಂದ್ರವನ್ನು ಮುಂದುವರಿಸುವುದು.

ಶ್ರೀ ಬಿ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ರಾಜ್ಯ ಯೋಜನೆ ಮುಖಾಂತರ ಶಿಕ್ಷಣ ಇಲಾಖೆಯು ರಾತ್ರಿ ಶಾಲೆಗಳನ್ನು ತಾ. ೩೧-೩-೧೯೮೭ರ ನಂತರ ಸಂಪೂರ್ಣವಾಗಿ ತಾಲ್ಲೂಕಿನುದ್ದಂತ ಮುಚ್ಚುವುದಾಗಿ ಸರ್ಕಾರಿ ಆಜ್ಞೆಯು ಹೊರಬಿದ್ದಿರುವುದರಿಂದ ಒಟ್ಟು ನೂರು ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕ ಕಾರ್ಯಕರ್ತರುಗಳಿಗೂ ಮತ್ತು ಇದರ ಪ್ರಯೋಜನ ಪಡೆಯುತ್ತಿದ್ದ ನೂರಾರು ಜನಗಳಿಗೂ ಅನಾನುಕೂಲವಾಗುವುದರಿಂದ ಜಿಲ್ಲಾದ್ಯಂತ ಬೇರೆ ತಾಲ್ಲೂಕ್‌ಗಳಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಶಾಲಾ ಕೇಂದ್ರಗಳಂತೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲೂ ಮುಂದುವರಿಸಿಕೊಂಡು ಹೋಗುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರು ಮತ್ತು ವಯಸ್ಕರ ಶಿಕ್ಷಣ ಇಲಾಖೆಯವರು ಕೆಲವು ರಾತ್ರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಈಗ ಇವುಗಳನ್ನು ಮುಚ್ಚಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಏತಕ್ಕೋಸ್ಕರ ಇವುಗಳನ್ನು ಮುಚ್ಚುತ್ತಿದ್ದಾರೆಂಬುದನ್ನು ವಿಚಾರ ಮಾಡುತ್ತೇನೆ. ಇವುಗಳ ಅವಶ್ಯಕತೆ ಇದ್ದರೆ ಮತ್ತೆ ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಲಕ್ಕಪ್ಪನವರು ಸಭೆಯಲ್ಲಿ ಹಾಜರಿಲ್ಲದಿರುವ ಕಾರಣ ಈಗ ಶ್ರೀ ಕೊಟ್ರಪ್ಪನವರು ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಬಿ.ಜಿ. ಕೊಟ್ರಪ್ಪ (ಹರಿಹರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಾನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ೧೯೮೭-೮೮ನೇ ಸಾಲಿನ ಆಯವ್ಯಯ ಪತ್ರವನ್ನು ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಪ್ರಥಮವಾಗಿ ಈ ಬಡ್ಜೆಟ್ ಅಂದರೆ ಏನು ಎಂಬ ಕಲ್ಪನೆ ನಮಗೆ ಬರಬೇಕಾಗಿದೆ. ಇದು ಕೆಲವು ಅನುಭವಿಗಳು ಹೇಳಿದ ರೀತಿಯಲ್ಲಿ

> "The Budget through committed resources for the Annual Plan becomes the operational instrument for plan implementation."

ನಮ್ಮ ರಾಜ್ಯದ ಹಣಕಾಸಿನ ಸಂಪನ್ಮೂಲಗಳಿಂದ ವಾರ್ಷಿಕ ಯೋಜನೆಗಳನ್ನು ತಯಾರು ಮಾಡಿ ಈ ಸದನದ ಒಪ್ಪಿಗೆ ಪಡೆದ ನಂತರ ಈ ಬಜೆಟ್ ಅನ್ನುವುದನ್ನು ಒಂದು ಇನ್‌ಸ್ಟ್ರುಮೆಂಟ್ ಆಗಿ ಉಪಯೋಗ ಮಾಡಿ, ಕಾರ್ಯಗತ ಮಾಡಿ, ನಮ್ಮ ಯೋಜನೆಗಳನ್ನು ಪರಿಪೂರ್ಣ ಮಾಡುವ ಕಾರ್ಯವನ್ನೇ ಈ ಬಜೆಟ್ ಅನ್ನುವ ಅರ್ಥದಲ್ಲಿ ಹೇಳಿದ್ದಾರೆ. ಈ ಒಂದು ಅರ್ಥದಲ್ಲಿ ನಮ್ಮ ಕರ್ನಾಟಕ ರಾಜ್ಯದ ಬಜೆಟ್‌ನ್ನು ವಿಚಾರ ಮಾಡಿದರೆ, ನಾವು ಎರಡು ರೀತಿಯಲ್ಲಿ ಬಜೆಟ್‌ನ್ನು ತಯಾರು ಮಾಡಬೇಕಾಗಿದೆ. ಒಂದು ನಮಗೆ ಸಿಗತಕ್ಕಂಥ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು. ಎರಡನೆಯದು ಕೇಂದ್ರ ಸರಕಾರದಿಂದ ಬರತಕ್ಕಂಥ ಅನುದಾನಗಳ ಬಗ್ಗೆ ಚಿಂತನೆ ಮಾಡುವುದು. ಈ ಎರಡೂ ಮೂಲಗಳ ಆಧಾರದ ಮೇಲೆ ಜನರ ಹಿತವನ್ನು ಸಾಧನೆ ಮಾಡುವಂತಹ ಒಂದು ಕಾರ್ಯ ಕ್ರಮಕ್ಕೆ ಬಜೆಟ್ ಎನ್ನುತ್ತಾರೆ. ಕೇಂದ್ರ ಸರಕಾರ ಮನುಷ್ಯನ ತಲೆ ಇದ್ದಂತೆ. ರಾಜ್ಯ ಸರ್ಕಾರಗಳು ಮನುಷ್ಯನ ತಲೆ ಬಿಟ್ಟು ಇತರ ಅಂಗಾಂಗಳು ಇದ್ದಂತೆ. ನಮ್ಮ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಕೇಂದ್ರ ಸರ್ಕಾರ ಈ ದೇಶದ ಹೆಚ್ಚಿನ ಉತ್ಪನ್ನಗಳನ್ನು ಹಾಗೂ ಆದಾಯವನ್ನು ತನ್ನ ಕೈಯಲ್ಲಿ ಹಿಡಿದಿಟ್ಟುಕೊಂಡಿದೆ. ಕೇಂದ್ರ ಸರ್ಕಾರ ತನಗೆ ಬರುವಂತಹ ಆದಾಯದಲ್ಲಿ ರಾಜ್ಯ ಸರ್ಕಾರಗಳಿಗೆ ಸರಿಯಾದ ಪಾಲನ್ನು ಕೊಡದಿದ್ದರೆ ರಾಜ್ಯಗಳ ಅಭಿವೃದ್ಧಿ ಆಗುವುದಿಲ್ಲ. ರಾಜ್ಯಗಳ ಅಭಿವೃದ್ಧಿ ಕುಂಠಿತವಾದರೆ,